**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ, ಕುಂದಾಪುರ.**

**ಸಿ.ಸಿ. ನಂ. 439/2024**

**ಪಿರ್ಯಾದಿದಾರರು** : ಶಂಕರನರಾಯಣ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿ** : 1) ವಿಜಯ ಕುಮಾರ್

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಪಡೆದುಕೊಂಡ ಆರೋಪಿತನ ಹೇಳಿಕೆ**

ಪ್ರಶ್ನೆ 1) ಈ ಪ್ರಕರಣದಲ್ಲಿ ವಿಚಾರಣೆಯಾದ ಸಾಕ್ಷಿದಾರರ ಪ್ರಮಾಣಪೂರ್ವಕ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆ 2) ಈ ಪ್ರಕರಣದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಅಭಿಯೋಜನೆಯ ಪರವಾಗಿ ಗುರುತಿಸಿಕೊಂಡಿರುವಂತಹ ದಾಖಲೆಗಳ ಬಗ್ಗೆ ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರಃ

ಪ್ರಶ್ನೆ 3) ಚಾಸಾ-1/ಪ್ರಾಸಾ-1/ಅಭಿಶೇಕ್ ಶೆಟ್ಟಿ/ಪಿರ್ಯಾದಿ ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ದಿ: 02/10/2022 ರಂದು ಬೆಳಿಗ್ಗೆ 9 ಗಂಟೆಗೆ ಕೆಎ-20-ಇಎಸ್-0505 ಮೋಟಾರು ಸೈಕಲಿನಲ್ಲಿ ಉಡುಪಿಗೆ ಹೊರಟಿದ್ದು, 11-45 ಗಂಟೆ ಸಮಯಕ್ಕೆ ಸಿದ್ದಾಪುರ ಕಡೆಯಿಂದ ಶಂಕರನಾರಾಯಣ ಮೂಲಕ ರಸ್ತೆಯ ಎಡಬದಿಯಲ್ಲಿ ಹೋಗುತ್ತಿದ್ದಾಗ, ಚಾರಮಕ್ಕಿ ಕೋಳಿ ಫಾರಂ ಕ್ರಾಸ್ ಬಳಿ ಕೆ ಎಸ್ ಆರ್ ಟಿ ಸಿ ಬಸ್ ಶಂಕರನಾರಾಯಣ ಕಡೆಯಿಂದ ಸಿದ್ದಾಪುರ ಕಡೆಗೆ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ತೀರ

ಬಲಭಾಗಕ್ಕೆ ಬಂದು ನನ್ನ ಬಲಭುಜಕ್ಕೆ ಡಿಕ್ಕಿ ಪಡಿಸಿರುತ್ತದೆ. ನಾನು ಬೈಕ ಸಮೇತ ರಸ್ತೆಯ ಮೇಲೆ ಬಿದ್ದಿದ್ದು, ಬಲಭಾಗದ ಭುಜದ ಮೂಳೆ ಮುರಿದಿರುತ್ತದೆ. ನನ್ನ ಬಲಕಾಲಿನ ಮಧ್ಯ ಬೆರಳು ತುಂಡಾಗಿರುತ್ತದೆ. ನನ್ನ ಬಲಕಾಲಿನ ಪಾದದ ಪೂರ್ತಿ ಮಾಂಸ ಹೊರಬಂದಿರುತ್ತದೆ. ಮುಂಗಾಲಿಗೆ ತರುಚಿದ ಗಾಯ, ಎಡಗೈ ಬೆರಳುಗಳಿಗೆ ತರುಚಿದ ಗಾಯಗಳಾಗಿರುತ್ತವೆ. ತನಗೆ ಅಪಘಾತಪಡಿಸಿದ ಬಸ್ಸಿನ ಚಾಲಕ ಮತ್ತು ಅಲ್ಲಿದ್ದ ಸುತ್ತಮುತ್ತಲಿನವರು ನನ್ನನ್ನು ಉಪಚರಿಸಿರುತ್ತಾರೆ. ಅಪಘಾತಪಡಿಸಿದ ಬಸ್ಸಿನ ಚಾಲಕನನ್ನು ನೋಡಿರುತ್ತೇನೆಂದು ನ್ಯಾಯಾಲಯದ ಮುಂದಿದ್ದ ಆರೋಪಿತರಾದ ತಮ್ಮನ್ನು ನೋಡಿ ಗುರುತಿಸಿ ಅಪಘಾತದ ವಿಚಾರವಾಗಿ ನಿಪಿ1 ರಂತೆ ದೂರು ಕೊಟ್ಟಿರುತ್ತೇನೆಂದು ನುಡಿದು, ನಿಪಿ 2 ರಿಂದ 6 ರಲ್ಲಿನ ವಾಹನಗಳ ಛಾಯಾಚಿತ್ರಗಳನ್ನು ಹಾಗೂ ಅವುಗಳಿಗೆ ಸಂಬಂಧ ಪಟ್ಟ ಸಿಡಿಯನ್ನು ನೋಡಿ ನಿಪಿ7 ಅಂತ ಗುರುತಿಸಿ, ನಿಪಿ 1 ಎ ತನ್ನ ಸಹಿ ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 4) ಪ್ರಾಸಾ-1 ಮುಂದುವರೆದು ಆಸ್ಪತ್ರೆಯಲ್ಲಿದ್ದಾಗ ಪೊಲೀಸರು ಆರೋಪಿಯ ಹೆಸರು ವಿಜಯ್ ಕುಮಾರ್ ಎಂದು ತಿಳಿಸಿದ್ದು ಬಸ್ಸಿನ ಚಾಲಕ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಅಜಾಗರೂಕತೆ ಮತ್ತು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 7) ಚಾಸಾ-2/ಪ್ರಾಸಾ-3/ಕೃಷ್ಣ ಮೂರ್ತಿ/ಪ್ರತ್ಯಕ್ಷ ಸಾಕ್ಷಿದಾರ/ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ನಿಪಿ 9/ಘಟನಾ ಸ್ಥಳದ ಪಂಚನಾಮೆಯನ್ನು ನೋಡಿ

ತನ್ನ ಸಹಿಯನ್ನು 9ಎ ಅಂತ ಗುರುತಿಸಿ, ವಾಹನಗಳ ಛಾಯಾ ಚಿತ್ರಗಳನ್ನು ನೋಡಿ ನಿಪಿ-2 ರಿಂದ 6 ಅಂತ ಗುರುತಿಸಿ ಘಟನಾ ಸ್ಥಳದಲ್ಲಿ ತೆಗೆದ ಫೋಟೋವನ್ನು ನಿಪಿ10 ಅಂತ ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 5) ಚಾಸಾ-7/ಪ್ರಾಸಾ-4/ರಾಜೇಶ್ ಮೊಗೇರ/ಡಿಪೋ ಮ್ಯಾನೇಜರ್ ತನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 02/10/2022ರದು ವಾಹನ ಸಂ.ಕೆಎ-09-ಎಫ್-5014 ರಲ್ಲಿ ವಿಜಯಕುಮಾರ್ ಈತನು ಚಾಲಕನಾಗಿಯೂ ಮಾಲ್ತೇಶ್ ರವರು ನಿರ್ವಾಹಕನಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂದು ನಿಪಿ.12 ರಂತೆ ದೃಢೀಕರಣ ಪತ್ರವನ್ನು ಕೊಟ್ಟಿರುತ್ತೇನೆಂದು ನುಡಿದು ತನ್ನ ಸಹಿಯನ್ನು ನಿಪಿ.12ಎ ಎಂತಲೂ ಹಾಗೂ ಚಾ.ಸಾ.8/ಸುದೀಂದ್ರ ವೈದ್ಯರವರಿಗೆ ಸದರಿ ವಾಹನವನ್ನು ಬಿಡಿಸಿಕೊಂಡು ಬರುವಂತೆ ನಿಪಿ.13 ರಂತೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತೇನೆಂದು ನುಡಿದು ತನ್ನ ಸಹಿಯನ್ನು ನಿಪಿ.13ಎ ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 6) ಚಾಸಾ-8/ಪ್ರಾಸಾ-5/ಸುದೀಂದ್ರ ವೈದ್ಯ/ಸಂಚಾರ ನಿಯಂತ್ರಕ ಕೆ ಎಸ್ ಆರ್ ಟಿ ಸಿ ವಿಭಾಗ ತನ್ನ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದಲ್ಲಿ ಅಪಘಾತಕ್ಕೀಡಾದ ಗಾಡಿಯನ್ನು ಬಿಡಿಸಿಕೊಂಡು ಬರಲು ಅಧಿಕಾರ ಪತ್ರ ಕೊಟ್ಟಂತೆ ತಾನು ಪೋಲಿಸ್ ಠಾಣೆಗೆ ಹೋಗಿ ನಿಪಿ.14 ರಂತೆ ಪೋಲಿಸರು ಕೊಟ್ಟ ನೋಟೀಸನ್ನು ಸ್ವೀಕರಿಸಿ ನಿಪಿ.15 ರಂತೆ ತನ್ನ ಕೈಯಾರೆ ಉತ್ತರ ನೋಟಿಸನ್ನು ಬರೆದುಕೊಟ್ಟಿರುತ್ತೇನೆಂದು ಸದರಿ ದಾಖಲೆಗಳಲ್ಲಿನ ತನ್ನ ಸಹಿಯನ್ನು ನಿಪಿ 13ಬಿ, ನಿಪಿ.14ಎ ಮತ್ತು 15ಎ ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 7) ಚಾಸಾ-4/ಪ್ರಾಸಾ-6/ಮಹಾಂತೇಶ್/ಕೆ ಎಸ್ ಆರ್ ಟಿ ಸಿ ಕಂಡಕ್ಟರ್ ತನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 02-10-2022ರಂದು ಸುಮಾರು ಬೆಳಿಗ್ಗೆ 11.00 ರಿಂದ 11.15ರ ಸಮಯದಲ್ಲಿ ಉಡುಪಿಯಿಂದ ಸಿದ್ದಾಪುರ ಕಡೆಗೆ ಹೋಗುತ್ತಿದ್ದಾಗ ಶಂಕರನಾರಾಯಣದಿಂದ ಸ್ವಲ್ಪ ಮುಂದೆ ಚಾರ್ಮತಿ ಎಂಬಲ್ಲಿ ನಮ್ಮ ಎದುರಿನಲ್ಲಿ ಬಂದವರು ಬಸ್ಸಿಗೆ ಡಿಕ್ಕಿಪಡಿಸಿರುತ್ತಾರೆ. ಅವರು ಮುಂಭಾಗದಲ್ಲಿ ಡಿಕ್ಕಿಪಡಿಸಲು ಬಂದಾಗ ಚಾಲಕ ಬಸ್ಸನ್ನು ಎಡಭಾಗಕ್ಕೆ ತೆಗೆದುಕೊಳ್ಳಲು ಹೋಗಿದ್ದು, ಆ ಸಮಯದಲ್ಲಿ ಬೈಕ್ ಸವಾರ ಬಸ್ಸಿನ ಬಲ ಬದಿಯ ಹಿಂಭಾಗ ಟಯರ್ ಗೆ ಸಿಕ್ಕಿಕೊಂಡಿರುತ್ತಾನೆ. ಅಪಘಾತ ಬೈಕ್ ಸವಾರನ ತಪ್ಪಿನಿಂದ ಆಗಿರುತ್ತದೆ ಎಂದು ಹೇಳಿಕೆ ನೀಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 8) ಚಾಸಾ-6/ಪ್ರಾಸಾ-7/ಕೃಷ್ಣ ಕುಲಾಲ್/ಘಟನಾ ಸ್ಥಳ ಪಂಚನಾಮೆಯ ಪಾಂಚ ತನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ 9 ಘಟನಾ ಸ್ಥಳದ ಪಂಚನಾಮೆ ಹಾಗೂ ಘಟನಾ ಸ್ಥಳದಲ್ಲಿ ತೆಗೆದ ಫೋಟೋಗಳನ್ನು ನೋಡಿ ನ್ನ ಸಹಿಯನ್ನು 9ಬಿ ಎಂದು ಗುರುತಿಸಿ 2 ವರ್ಷಗಳ ಹಿಂದೆ ನಮ್ಮ ಅಂಗಡಿಯ ಸ್ವಲ್ಪ ಮುಂಭಾಗದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸು ಹಾಗೂ ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿದ್ದು ಪೊಲೀಸರು ಅಲ್ಲಿ ಬಂದಿದ್ದು ನಾನು ನೋಡಲು ಹೋದಾಗ ಪೊಲೀಸರು ನನ್ನ ಬಳಿ ಸಹಿ ಪಡೆದುಕೊಂಡಿರುತ್ತಾರೆ ಹಾಗೂ ಫೋಟೋ ತೆಗೆದಿರುತ್ತಾರೆಂದು ಸಮಯ 12.00 ರಿಂದ 12.30 ರವರಿಗೆ ನಿಪಿ.9ಕ್ಕೆ ಸಹಿ ಮಾಡಿರುತ್ತೇನೆಂದು ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 9) ಚಾಸಾ-9/ಪ್ರಾಸಾ-8/ಉದಯ ಕುಮಾರ ಎಸ್/ಮೋಟಾರು ವಾಹನ ನಿರೀಕ್ಷಕರು ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ದಿನಾಂಕ 03-10-2022 ರಂದು ಶಂಕರನಾರಾಯಣ ಪೊಲೀಸರ ಕೋರಿಕೆಯ ಮೇರೆಗೆ ಅಪಘಾತಕ್ಕೀಡಾದ ವಾಹನ ಸಂಖ್ಯೆ ಕೆಎ-09-ಎಫ್ -5014 ಮಜಲು ವಾಹನವನ್ನು 5.30 ಗಂಟೆಗೆ ಕೆಎ- 20 ಇಸ್- 0505 ದ್ವಿ ಚಕ್ರ ವಾಹವನ್ನು ವಾಹನಗಳನ್ನು ಪರೀಕ್ಷಿಸಿದ್ದು ದ್ವಿ ಚಕ್ರ ವಾಹನ ಸಂಖ್ಯೆ ಕೆಎ- 20 ಇಸ್ - 0505 ಕ್ಕೆ ಎದುರಿನ ಚಕ್ರ, ಹೆಡ್ ಲೈಟ್, ಸೈಲೆಸ್ಸರ್ ಹಿಂದಿನ ಎಡಭಾಗದ ಪುಟ್ ರೆಸ್ಟ್ ರೆರ್ ಮಡ್ ಗಾರ್ಡ್, ಬಲಬದಿಯ ಇಂಜಿನ್ ಕವರ್ ಜಖಂಗೊಂಡಿತ್ತು ಹಾಗೂ ವಾಹನ ಸಂಖ್ಯೆ ಕೆಎ 09 ಎಫ್ 5014 ವಾಹನದಲ್ ಹಿಂಭಾಗದ ಬಲಬದಿಯ ಬಾಡಿ ಹಿಂದಿನ ಚಕ್ರದ ಬಳಿ ಜಖಂಗೊಂಡಿರುತ್ತು ತಾನು ವಾಹನಗಳನ್ನು ನಿಶ್ಚಲ ಸ್ಥಿತಿಯಲ್ಲಿ ಪರಿಶೀಲಿಸಿದಾಗ ತಡೆ ವ್ಯವಸ್ಥೆ ಸುಸ್ಥಿತಿಯಲ್ಲಿತ್ತು ನನ್ನ ಅಭಿಪ್ರಾಯದಂತೆ ಯಾವುದೇ ಯಾಂತ್ರಿಕ ದೋಷದಿಂದ ಈ ಅಪಘಾತವಾಗಿರುವುದಿಲ್ಲವೆಂದು ನಿ.ಪಿ.16 ಮತ್ತು ನಿ.ಪಿ.17 ರಂತೆ ವರದಿ ನೀಡಿರುತ್ತದೆಂದು ನುಡಿದು ತನ್ನ ಸಹಿಗಳನ್ನು ನಿ.ಪಿ.16 (ಎ) ಮತ್ತು ನಿ.ಪಿ.17(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 10)ಚಾಸಾ-10/ಪ್ರಾಸಾ-9/ಡಾ. ಉಲ್ಲಾಸ್ ಶೆಟ್ಟಿ/ವೈದ್ಯಾಧಿಕಾರಿಗಳು ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ಅಭಿಷೇಕ ಶೆಟ್ಟಿ ಎಂಬುವರರು ಚಾರುಮಕಿ ಶಂಕರನಾರಯಣದಲ್ಲಿ ದಿನಾಂಕ 02-10-2020 ರಂದು ಬೆಳಿಗ್ಗೆ 11 ಗಂಟೆಯಲ್ಲಿ ರಸ್ತೆ ಅಪಘಾತ ಹಿನ್ನಲೆಯಲ್ಲಿ ಒಳರೋಗಿಯಾಗಿ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಅದೇ ದಿನ ನಾನು 3.30 ಗಂಟೆಗೆ ದಾಖಲಿಸಿಕೊಂಡು ಪ್ರಥಮ ಚಿಕಿತ್ಸೆ ನೀಡಿದ್ದು, ಅವರ ಬಲ ಕೈ ಹುಮರೇಸ್

ಮೂಳೆ ಮುರಿದಿತ್ತು. ಬಲ ಕೈ 3 ಸೆ ಮಿ * 2 ಸೆಂ. ಮೀ ಮಾಂಸ ಕಾಣುವ ಹರಿದ ಗಾಯ ಆಗಿತ್ತು. ಎಡ ಕೈಯಲ್ಲಿ 2 * 1 ಸೆಂ. ಮೀ ಕೆಂಪು ಬಣ್ಣದ ತರಚಿದ ಗಾಯ ಆಗಿತ್ತು. ಎಡ ಮಂಡಿಯಲ್ಲಿ 4 * 3 ಸೆಂ. ಮೀ ಕೆಂಪು ಬಣ್ಣದ ತರಚಿದ ಗಾಯ ಆಗಿತ್ತು. ಬಲ ಪಾದದಲ್ಲಿ 3* 2 ಸೆಂ. ಮೀ ಮೂಳೆ ಕಾಣುವ ಹರಿದ ಗಾಯ ಆಗಿದ್ದು, 3 ನೇ ಬೆರಳು ಮುರಿದಿತ್ತು. ನನ್ನ ಅಭಿಪ್ರಾಯದಲ್ಲಿ 1 ಮತ್ತು 5 ನೇ ಗಾಯಗಳು ತೀವ್ರ ಸ್ವರೂಪದ ಗಾಯ ಆಗಿದು 2 ರಿಂದ 4 ಗಾಯಗಳು ಸಾಮಾನ್ಯ ಸ್ವರೂಪದ ಗಾಯ ಆಗಿರುತ್ತದೆಂದು ನಿ.ಪಿ. 18 ರಂತೆ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆಂದು ನುಡಿದು ತನ್ನ ಸಹಿಯನ್ನು ನಿ.ಪಿ. 18(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 11)ಚಾಸಾ-12/ಪ್ರಾಸಾ-10/ಗೋಪಾಲ ಕೃಷ್ಣ ಹೆಚ್ /ಪೋಲಿಸ್ ಅಧಿಕಾರಿ ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ದಿನಾಂಕಃ 03-10-2022 ರಂದು ಶಂಕರನಾರಾಯಣ ಠಾಣೆಯ ಅಪರಾಧ ಸಂಖ್ಯೆ 103/2022 ರಲ್ಲಿ ಮಹಜರ್ ಸಮಯ ಪೋಟೋ ತೆಗೆದಿದ್ದು ಈ ಬಗ್ಗೆ ಕಲಂ 65 ಬಿ ರಡಿಯಲ್ಲಿ ನಿಪಿ19 ರಂತೆ ಪ್ರಮಾಣ ಪತ್ರ ಕೊಟ್ಟಿರುತ್ತೇನೆಂದು ನುಡಿದು ತನ್ನ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 12)ಚಾಸಾ-14/ಪ್ರಾಸಾ-11/ಶ್ರೀಧರ್ ನಾಯಕ್/ ತನಿಖಾಧಿಕಾರಿ ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ದಿನಾಂಕಃ 02-10-2022 ರಂದು ಠಾಣಾ ಪೊಲೀಸ್ ಪೇದೆ ಜಯರಾಮ ನಾಯಕ್ ರವರು ತಂದು ಹಾಜರು ಪಡಿಸಿದ ಹೇಳಿಕೆ ದೂರನ್ನು ಸ್ವೀಕರಿಸಿಕೊಂಡು ಅಪರಾಧ ಸಂಖ್ಯೆ 103/2022 ರಂತೆ ಪ್ರಕರಣ

ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನಿ.ಪಿ.1/ದೂರು ಹಾಗೂ ನಿ.ಪಿ.20/ಪ್ರಥಮ ವರ್ತಮಾನ ವರದಿಯನ್ನು ಮೇಲಾಧಿಕಾರಿಯವರಿಗೆ ಹಾಗೂ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆಂದು ನುಡಿದು ತನ್ನ ಸಹಿಯನ್ನು ನಿ.ಪಿ. 1(ಎ) ಮತ್ತು ನಿ.ಪಿ. 20(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 13)ಪ್ರಾಸಾ-11 ಮುಂದುವರೆದು ದಿನಾಂಕ 03-10-2022 ರಂದು ಪ್ರತ್ಯಕ್ಷ ಸಾಕ್ಷಿದಾರರಾದ ಕೃಷ್ಣಮೂರ್ತಿಯಮರ ಘಟನಾ ಸ್ಥಳ ತೋರಿಸಿದಂತೆ ಪಂಚಯಿತಿದಾರರಾದ ಕೃಷ್ಣ ಹಾಗೂ ಗಜೇಂದ್ರರವರ ಸಮಕ್ಷಮ ಪಂಚನಾಮೆಯನ್ನು ಬೆಳಿಗ್ಗೆ 11 ರಿಂದ 11.45 ಗಂಟೆಯವರೆಗೆ ನಿ.ಪಿ.9/ಪಂಚಾನಾಮೆಯನ್ನು ಸ್ಥಳದಲ್ಲಿ ತಯಾರಿಸಿ ನಿ.ಪಿ.21 /ನಕ್ಷೆ ಹಾಗೂ ನಿ.ಪಿ.10/ ಪೋಟೋವನ್ನು ಸ್ಥಳದಲ್ಲಿ ತೆಗೆದಿರುತ್ತೇನೆಂದು ನುಡಿದು ನಕ್ಷೆ/ ನಿ.ಪಿ.21 ರಲ್ಲಿನ ಸಹಿಯನ್ನು ನಿ.ಪಿ. 21(ಎ), ಮಹಜರು/ ನಿ.ಪಿ.9 ಹಾಗೂ ನಿ.ಪಿ.10/ಪೋಟೋಗಳಲ್ಲಿನ ತನ್ನ ಸಹಿಯನ್ನು ನಿ.ಪಿ.9(ಸಿ) ಮತ್ತು 10(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 14)ಪ್ರಾಸಾ-11 ಮುಂದುವರೆದು ಅದೇ ದಿನ ಕೃಷ್ಣಮೂರ್ತಿ, ಗಜೇಂದ್ರ, ಮಿತ್ಯಾಂತರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆಂದು ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 15)ಪ್ರಾಸಾ-11 ಮುಂದುವರೆದು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪ್ರತಿ ಪ್ರಕರಣ ದಾಖಲಾಗಿದ್ದು ಆ ಪ್ರಕರಣದಲ್ಲಿ ದ್ವಿ ಚಕ್ರ ವಾಹನ ಹಾಗೂ ಬಸ್ ನ್ನು ವಶಪಡಿಸಿಕೊಂಡಿದ್ದು ಆ ದಿನ ಘಟಕಾ ವ್ಯವಸ್ಥಾಪಕರು ಕುಂದಾಪುರ ಘಟಕಾದವರಿಗೆ ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಚಾಲಕ ಹಾಗೂ ನಿರ್ವಾಹಕರ ಬಗ್ಗೆ ಸಂಬಂಧಿಸಿದ ಅಧಿಕಾರ ಪತ್ರ ನೀಡುವಂತೆ ಕೋರಿಕೆಯನ್ನು ಸಲ್ಲಿಸಿಕೊಂಡಿರುತ್ತೇನೆ. ಅದೇ ದಿನ ಸದರಿ ಘಟಕಾ ವ್ಯವಸ್ಥಾಪಕರು ಆ ಬಗ್ಗೆ ನಿ.ಪಿ.12/ಅಧಿಕಾರ ಪತ್ರ ಹಾಗೂ ನಿ.ಪಿ.13/ದೃಡಿಕರಣ ಪತ್ರವನ್ನು ದಿನಾಂಕ 03-10-2022 ರ ಅರ್ಜಿಯೊಂದಿಗೆ ನೀಡಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು ನುಡಿದು ತನ್ನ ಸಹಿಗಳನ್ನು ನಿ.ಪಿ.13(ಬಿ) ಹಾಗೂ 12(ಬಿ) ಎಂದು, ನಿ.ಪಿ.22 /ದಿನಾಂಕ 03-10-2022 ರ ಅರ್ಜಿಯಲ್ಲಿನ ತನ್ನ ಸಹಿಯನ್ನು ನಿ.ಪಿ. 22(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 16)ಪ್ರಾಸಾ-11 ಮುಂದುವರೆದು ದಿನಾಂಕ 04-10-2022 ರಂದು ಸದರಿ ಕೆ ಎಸ್ ಆರ್ ಟಿ ಸಿ ಬಸ್ ನ ಅಧಿಕಾರ ಪತ್ರ ಹೊಂದಿರುವ ಸುಧೀಂದ್ರ ವೈದ್ಯರವರಿಗೆ ಕಲಂ 133 ರಡಿಯಲ್ಲಿ ನಿ.ಪಿ.14 ರಂತೆ ನೋಟಿಸು ಕೊಟ್ಟು ಅದೇ ದಿನ ಸುಧೀಂದ್ರ ವೈದ್ಯ ಇವರು ನಿ.ಪಿ.15/ ಉತ್ತರವನ್ನು ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು ನುದು ತನ್ನ ಸಹಿಗಳನ್ನು ನಿ.ಪಿ.14(ಬಿ) ಮತ್ತು 15(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 17)ಪ್ರಾಸಾ-11 ಮುಂದುವರೆದು ಅದೇ ದಿನ ಆರೋಪಿತರಾದ ವಿಜಯ್ ಕುಮಾರ್ ತೆಮಿಳುನಾಡುರವರು ಠಾಣೆಗೆ ಹಾಜರಾಗಿದ್ದು ಆತನ ದಸ್ತಗಿರಿ ನಿಯಮ

ಪಾಲಿಸಿ ದಸ್ತಗಿರಿ ಮಾಡಿ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿ, ವಾಹನದ ಮಾಲೀಕನಿಂದ ಸೂಕ್ತ ಜಾಮೀನನ್ನು ಪಡೆದುಕೊಂಡು ಬಿಡುಗಡೆ ಗೊಳಿಸಿರುತ್ತೇನೆಂದು ನುಡಿದು ಇಂಡಿಮೇನಿಟಿ ಬಾಂಡ್ /ನಿ.ಪಿ.23 ರಲಲಿನ ತನ್ನ ಸಹಿಯನ್ನು ನಿ.ಪಿ. 23(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 18)ಪ್ರಾಸಾ-11 ಮುಂದುವರೆದು ದಿನಾಂಕ 04-10-2022 ರಂದು ಉಡುಪಿ ಆದರ್ಶ ಆಸ್ಪತ್ರೆಯಿಂದ ನಿಪಿ 18 ರಂತೆ ಗಾಯದ ದೃಡಿಕೃತ ಪತ್ರವನ್ನು ಪಡೆದು ದಿನಾಂಕ 29-10-2022 ರಂದು ಉಡುಪಿ ಆದರ್ಶ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಪಡೆದು ನಿಪಿ 16 ಮತ್ತು 17 ರಂತೆ ಮೋಟಾರು ವಾಹನ ನೀರಿಕ್ಷಕರಿಂದ ವಾಹನ ಪರಿಶೀಲನಾ ವರದಿಗಳನ್ನು ಪಡೆದು ಪ್ರಾಸಾ 10ರವರಿಂದ ನಿಪಿ19 ರಂತೆ ಪ್ರಮಾಣಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು ನುಡಿದು ತನ್ನ ಸಹಿಗಳನ್ನು ಕ್ರಮಾಗಿ 16(ಬಿ) ಯಿಂದ 19(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 19)ಚಾಸಾ-13/ಪ್ರಾಸಾ-12/ಮಹಾಬಲ/ದಾಖಲಾಧಿಕಾರಿ ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ದಿನಾಂಕಃ 02-10-2022 ರಂದು ಪಿ ಎಸ್ ಐ ರವರ ಆದೇಶದಂತೆ ಅಪಘಾತ ಆಗಿ ಅಭಿಶೇಕ್ ರವರು ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಅವರ ಹೇಳಿಕೆ ಪಡೆದುಕೊಂಡು ಪ್ರಕರಣ ದಾಖಲಿಸುವರೇ ಪಿ ಸಿ 2516 ರವರ ಜೊತೆಗೆ ಠಾಣೆಗೆ

ಕಳುಹಿಸಿಕೊಟ್ಟಿರುತ್ತೇನೆಂದು ನುಡಿದು ನಿಪಿ 1 ರಲ್ಲಿನ ತನ್ನ ಸಹಿಯನ್ನು ನಿ.ಪಿ. 1(ಬಿ) ಎಂದು ಗುರುತಿಸಿಕೊಂಡಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 20)ಚಾಸಾ-5/ಪ್ರಾಸಾ-13/ಪ್ರಮೋದ/ಘಟನಾ ಸ್ಥಳ ಪಂಚನಾಮೆಯ ಪಾಂಚ ತನ್ನ ಮುಖ್ಯ ವಿಚಾರಣಾ ಸಾಕ್ಷ್ಯಾದಲ್ಲಿ ನಿಪಿ 9ರಲ್ಲಿನ ತನ್ನ ಸಹಿಯನ್ನು 9ಡಿ ಅಂತ ಗುರುತಿಸಿ ಚಾರ್ ಮಕ್ಕಿ ಬಸ್ ನಿಲ್ದಾಣದ ಹತ್ತಿರ ಬಸ್ ಹಾಗೂ ಬೈಕ್ ನಡುವೆ ಅಪಘಾತ ಆಗಿದ್ದು ನಾನು ಹಾಗೂ ನನ್ನ ಅಣ್ಣ ಬೈಕ್ ನಲ್ಲಿ ಪೇಟೆಗೆ ಹೋಗುತ್ತಿದ್ದಾಗ ಪೊಲೀಸರು ಸಹಿ ಹಾಕಿ ಅಂತ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಅಲ್ಲಿ ನಿ.ಪಿ. 10 ರಂತೆ ಪೋಟೋ ತೆಗೆದಿರುತ್ತಾರೆಂದು ನುಡಿದಿರುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರ:

ಪ್ರಶ್ನೆ 21) ಈ ಕೇಸಿನಲ್ಲಿ ನಿಮ್ಮ ಪರ ಸಾಕ್ಷಿ ಇದ್ದಾರೆಯೇ ?

ಉತ್ತರ:

ಪ್ರಶ್ನೆ 22) ಈ ಕೇಸಿನಲ್ಲಿ ನಿಮ್ಮ ಪರ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುತ್ತೀರಾ ?

ಉತ್ತರ:

ಪ್ರಶ್ನೆ 23) ಈ ಕೇಸಿನಲ್ಲಿ ನೀವು ಏನಾದರೂ ಹೆಚ್ಚಿಗೆ ಹೇಳುವುದು ಇದೆಯಾ?

ಉತ್ತರ:

(ಆರೋಪಿತರು ನೀಡಿದ ಉತ್ತರಗಳನ್ನು ಸರಿಯಾಗಿ ದಾಖಲಿಸಿಕೊಂಡಿದೆ ಎಂದು ದೃಢಿಕರಿಸಲಾಗಿದೆ)

**(ಮಂಜುಳ .ಬಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂಡಾಧಿಕಾರಿ, ಕುಂದಾಪುರ.**